FDP.20/2017
Cross of RW1

**<u>ದಿನಾಂಕ:28-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.</u>**

**<u>ಪಾಟೀ ಸವಾಲುಃ ಅರ್ಜಿದಾರರ ಪರಃ ಜಿಡಿ. ವಕೀಲರಿಂದಃ</u>**

ಅರ್ಜಿದಾರರು ನನ್ನ ಅಣ್ಣ ಎಂದರೆ ಸರಿ. ಪಿತ್ರಾರ್ಜಿತ ಸ್ವತ್ತುಗಳಲ್ಲಿ ಭಾಗ ಬರಬೇಕು ಎಂದು ಅರ್ಜಿದಾರರು ಒ.ಎಸ್.113/1998 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಆ ದಾವೆಯ ವಾದಿ ಮತ್ತು ಪ್ರತಿವಾದಿಗಳಿಗೆ ತಲಾ 1/5 ಭಾಗ ಇದೆ ಎಂದು ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಆ ಡಿಕ್ರಿಯ ಅಮಲ್ಜಾರಿಗಾಗಿ ಅರ್ಜಿದಾರರು ಎಫ್.ಡಿ.ಪಿ.27/2015 ಅನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ಎಫ್.ಡಿ.ಪಿ.27/2015 ಅನ್ನು ರಾಜಿ ಮಾಡಿಕೊಳ್ಳಬೇಕು ಎಂದು ವಾಪಸ್ಸು ಪಡೆಯಲಾಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ದಿಃ12-09-2009 ರಂದು ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣಶಾಸನ ಪತ್ರವನ್ನು ಬರೆದಿರುತ್ತಾರೆ ಎಂದು ನಾನು ಒ.ಎಸ್.35/2016 ಅನ್ನು ಸಲ್ಲಿಸಿದ್ದೆ ಎಂದರೆ ಸರಿ. ಆ ದಾವೆಯಲ್ಲಿ 9 ಜನರಿಗೆ ನಮ್ಮ ತಂದೆಯ ಹಣದಲ್ಲಿ ಹಕ್ಕು ಇದೆ ಎಂದು ತೀರ್ಪಾಗಿರುತ್ತದೆ ಎಂದರೆ ಸರಿ. ಆ ಮರಣಶಾಸನದಲ್ಲಿ ಸ್ವತ್ತುಗಳನ್ನು ನನಗೆ ಕೊಡಲಾಗಿದೆ ಎಂದು ನನ್ನ ತಂದೆ ಬರೆಸಿದ್ದರು ಎಂದರೆ ಸರಿ. ನನ್ನ ತಾಯಿ ಮಾಡಿದ ಮರಣಶಾಸನಕ್ಕೆ ಸಂಬಂಧಿಸಿ ಪ್ರೊಬೇಟ್ ಅನ್ನು ಪಡೆದುಕೊಂಡಿರುವುದಿಲ್ಲ. ನಮ್ಮ ತಂದೆಯು ಯಾವುದೇ ಮರಣಶಾಸನ ಪತ್ರವನ್ನು ಬರೆಯದೇ ಇರುವ ಕಾರಣ ನನ್ನ ತಂದೆಯ ಆಸ್ತಿಯಲ್ಲಿ ಎಲ್ಲಾ ಪಕ್ಷಗಾರರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ನಮ್ಮ ತಾಯಿಯು ಮರಣ ಶಾಸನ ಪತ್ರ ಬರೆದಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಮ್ಮ ತಂದೆಯ ಹಿಸ್ಸೆಗೆ ಬಂದಿರುವ ಸ್ವತ್ತು ಮತ್ತು ಹಣದಲ್ಲಿ ಎಲ್ಲರಿಗೂ ಸಮನಾದ ಹಕ್ಕು ಇರುತ್ತದೆ ಎಂದರೆ, ಹಣದಲ್ಲಿ ಮಾತ್ರ ಎಲ್ಲರಿಗೂ ಹಕ್ಕು ಇರುತ್ತದೆ, ಆಸ್ತಿಯಲ್ಲಿ ಇರುವುದಿಲ್ಲ.

**ಮರು ವಿಚಾರಣೆಃ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.